**ಸಾಕ್ಷಿಯನ್ನು ದಿನಾಂಕಃ 10.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ ವಾದಿ ಪರ ಶ್ರೀ ಕೆ.ಎಸ್.ಎನ್, ವಕೀಲರಿಂದಃ**

ನಿಪಿ-4 ರಲ್ಲಿ ಸರ್ವೆ ನಂ.112/1 ರ ಜಮೀನನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಭೂಮಾಪಕರು ನಮೂದಿಸಿಲ್ಲ ಎಂದರೆ ಸರಿ. ನ್ಯಾಯಾಲಯದಿಂದ ನಿಯೋಗಿಯವರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ, ವರದಿ ನೀಡಿರುತ್ತಾರೆ ಎಂದರೆ ಸರಿ. ನ್ಯಾಯಾಲಯದ ನಿಯೋಗಿಯವರು ಅಳತೆ ಮಾಡುವಾಗ ಸ್ಥಳದಲ್ಲಿದ್ದೆನು, ಆದರೆ ನಾನು ಸಹಿ ಹಾಕಿರುವುದಿಲ್ಲ. ನ್ಯಾಯಾಲಯದ ನಿಯೋಗಿಯವರು ಸಲ್ಲಿಸಿರುವ ನಕ್ಷೆಯಲ್ಲಿ ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ಯಾವುದೇ ರೀತಿ ಒತ್ತುವರಿಯಾಗಿರುವುದಿಲ್ಲವೆಂದು ಹೇಳಿರುತ್ತಾರೆ ಎಂದರೆ ನಕ್ಷೆ ತಯಾರಿಸಿರುತ್ತಾರೆ, ಆದರೆ ನಾನು ಸಹಿ ಮಾಡಿರುವುದಿಲ್ಲ. ನಾನು ಪ್ರತ್ಯೇಕವಾಗಿ ಹದ್ದುಬಸ್ತು ನಕ್ಷೆ ತಯಾರಿಸಲು ಭೂ ಮಾಪನ ಇಲಾಖೆಗೆ ಅರ್ಜಿ ಸಲ್ಲಿಸಿರುವುದಿಲ್ಲ. ಈ ರೀತಿ ಅರ್ಜಿ ಸಲ್ಲಿಸಲು ಯಾವುದೇ ತೊಂದರೆ ಇರುವುದಿಲ್ಲ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನನ್ನ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಇಲ್ಲಿಯವರೆಗೂ 3 ಬಾರಿ ಜಮೀನನ್ನು ಅಳತೆ ಮಾಡಿಸಿರುತ್ತಾರೆ ಎಂದರೆ ಸರಿ. ಪ್ರತಿ ಬಾರಿಯೂ ಕೂಡ ಅವರಿಗೆ ತೊಂದರೆ ಕೊಡುತ್ತಾ ಅವರ ಜಮೀನಿಗೆ ಬೇಲಿ ಹಾಕಲು ಅವಕಾಶ ಕೊಡುತ್ತಿಲ್ಲ ಎಂದರೆ ನನ್ನ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ಸುಮಾರು ಮರಗಳಿರುತ್ತವೆ ಎಂದರೆ ಸರಿ. ಸದರಿ ಮರಗಳು ವಾದಿಯ ಜಮೀನಿನ ಒಳಗಡೆ ಇರುವುದರಿಂದ ಹೇಗಾದರೂ ಆ ಮರಗಳನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಅವರ ಜಮೀನಿನಲ್ಲಿ ಬೇಲಿ ಹಾಕಲು ನಾನು ತೊಂದರೆ ಕೊಡುತ್ತಿದ್ದೇನೆ ಎಂದು ಬಿಳಿಗೆರೆ ಪೊಲೀಸ್ ಠಾಣೆಗೆ ದೂರು ದಾಖಲಾಗಿತ್ತು ಎಂದರೆ ಸರಿ. ಅದೇ ರೀತಿ ತಹಶೀಲ್ದಾರ್ ರವರಿಗೂ

ಕೂಡ ದೂರು ಅರ್ಜಿ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ತಹಶೀಲ್ದಾರ್ ರವರು ವಾದಿಗೆ ಪೊಲೀಸ್ ರಕ್ಷಣೆ ನೀಡಿ ಎಂದು ಆದೇಶ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ-18 ರಲ್ಲಿ ಕಾಣುವಂತೆ ಮರಗಳಿರುವ ಜಮೀನು ಆದ ನಂತರ ಬಲಗಡೆಗೆ ನನ್ನ ಜಮೀನು ಇರುತ್ತದೆ ಎಂದರೆ ಮರಗಳು ಕೂಡ ನನಗೆ ಬರಬೇಕಾಗುತ್ತದೆ. ಸದರಿ ಮರಗಳು ವಾದಿಗೆ ಸೇರುತ್ತವೆ ಎಂದು ಗೊತ್ತಿದ್ದರೂ ಕೂಡ ನನಗೂ ಸೇರಬೇಕೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯ ವಿರುದ್ಧ ಯಾವುದೇ ದೂರು ದಾಖಲಿಸಿರುವುದಿಲ್ಲ. ವಾದಿ ಭೂ ಮಾಪನ ಇಲಾಖೆಯಿಂದ ಮೂರು ಬಾರಿ ಸರ್ವೆ ಮಾಡಿಸಿದಾಗಲೂ ನಿಪಿ-18 ರಲ್ಲಿ ಕಾಣುವ ಮರಗಳು ವಾದಿಯ ಜಮೀನಿನಲ್ಲಿರುತ್ತವೆಂದು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ವಾದಿ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದು, ಪಶ್ಚಿಮ ದಿಕ್ಕಿನಲ್ಲಿ ಬೇಲಿ ಹಾಕಲು ಅವರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ವಾದಿ ನನಗೆ ಸೇರಿದ ಜಮೀನನ್ನು ಒತ್ತುವರಿ ಮಾಡಿಕೊಂಡಿರುವುದರಿಂದ ಬೇಲಿ ಹಾಕಲು ನಾನು ಅವಕಾಶ ಕೊಡುತ್ತಿಲ್ಲ. ವಾದಿ ನನ್ನ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ. ನಮ್ಮ ಜಮೀನಿನ ದಕ್ಷಿಣಕ್ಕೆ ನೀರು ಹರಿಯುವ ಹಳ್ಳ ಇದ್ದು, ಸದರಿ ಹಳ್ಳ ಸರ್ಕಾರಿ ಹಳ್ಳವಾಗಿರುತ್ತದೆ. ನಮ್ಮ ಜಮೀನು ಹಳ್ಳಕ್ಕೆ ಹೋಗಿರುವುದಿಲ್ಲ. ಅದೇ ರೀತಿ ಸರ್ವೆ ನಂ.113 ರ ಜಮೀನಿನ ದಕ್ಷಿಣದಲ್ಲಿ ಸದರಿ ಹಳ್ಳ ಹರಿದುಹೋಗುತ್ತದೆ ಎಂದರೆ ಸರಿ. ಸರ್ವೆ ನಂ.113 ಕ್ಕೂ ಮತ್ತು ಅದರ ದಕ್ಷಿಣ ದಿಕ್ಕಿನಲ್ಲಿ ಹರಿಯುವ ಹಳ್ಳಕ್ಕೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿ, ಸದರಿ ಹಳ್ಳ ಸರ್ಕಾರಿ ಹಳ್ಳವಾಗಿರುತ್ತದೆ ಎಂದರೆ ಸರಿ. ವಾದಿ ಯಾವುದೇ ಜಮೀನನ್ನು ಒತ್ತುವರಿ ಮಾಡಿಕೊಂಡಿಲ್ಲ ಮತ್ತು ಯಾವುದೇ ಸರ್ವೆ ಕಲ್ಲನ್ನು ಕಿತ್ತುಹಾಕಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಯಾವ ದಿಕ್ಕಿನಲ್ಲೂ ವಾದಿ ಯಾವುದೇ ಜಮೀನನ್ನು ಒತ್ತುವರಿ ಮಾಡಿಕೊಂಡಿಲ್ಲ ಎಂದರೆ ದಾವಾ ಸ್ವತ್ತಿನ ಪೂರ್ವ ದಿಕ್ಕಿನಲ್ಲಿ ಕಾಲುವೆ

ಮತ್ತು ರಸ್ತೆ ಹೋಗಿದ್ದು, ಅದನ್ನು ಸೇರಿಸಿ ಅಳತೆ ಮಾಡಿಬೇಕಾಗುತ್ತದೆ. ದಾವಾ ಸ್ವತ್ತಿನ ಪೂರ್ವಕ್ಕೆ ಕಮಲಮ್ಮ ಮತ್ತು ಮಹದೇಪ್ಪರವರ ಜಮೀನು ಇರುತ್ತದೆ ಎಂದರೆ ಸರಿ. ನಿಪಿ-15 ರಲ್ಲಿ ಕಾಣುವ ರಸ್ತೆಯ ಮುಖಾಂತರವೇ ಸದರಿ ಕಮಲಮ್ಮ ಮತ್ತು ಮಹದೇವಪ್ಪರವರು ತಮ್ಮ ಜಮೀನಿಗೆ ಹೋಗುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನ ಪೂರ್ವ ದಿಕ್ಕಿನಲ್ಲಿರುವ ರಸ್ತೆಯ ಉದ್ದ 2 ಮೀಟರ್ ಇದೆ ಎಂದರೆ 25-30 ಮೀಟರ್ ಉದ್ದ ಇರುತ್ತದೆ. ನಿಪಿ-15 ರಲ್ಲಿ ಕಾಣುವ ರಸ್ತೆ ಮತ್ತು ಕಾಲುವೆ ಸುಮಾರು ವರ್ಷಗಳಿಂದ ಇರುತ್ತದೆ ಎಂದರೆ ಸರಿ. ನಿಪಿ-15 ರಲ್ಲಿ ಕಾಣುವ ಕಾಲುವೆಯ ನಂತರ ಏರಿ ಇರುತ್ತದೆ. ನಿಪಿ-15 ರಲ್ಲಿ ಕಾಣುವ ರಸ್ತೆ ಮತ್ತು ಕಾಲುವೆ ಸರ್ಕಾರಿ ಸ್ವತ್ತಾಗಿರುತ್ತದೆ ಎಂದರೆ ವಾದಿಯ ಜಮೀನಿನಲ್ಲಿ ರಸ್ತೆ ಹೋಗಿರುತ್ತದೆ. ನಿಪಿ-15 ರಲ್ಲಿ ಕಾಣುವ ರಸ್ತೆಯಾದ ನಂತರವೇ ವಾದಿಯ ಜಮೀನಿನ ಎಲ್ಲೆ ಪ್ರಾರಂಭವಾಗುತ್ತದೆ ಎಂದರೆ ಸರಿಯಲ್ಲ. ನಾನು ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ವಾದಿ ನನ್ನ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಯಾವುದೇ ರೀತಿ ಒತ್ತುವರಿ ಮಾಡಿಕೊಳ್ಳದಿದ್ದರೂ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಒತ್ತುವರಿ ಮಾಡಿಕೊಂಡಿದ್ದಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವದ ಕಡೆ ಸರ್ಕಾರದವರು ರಸ್ತೆಗಾಗಿ ಒತ್ತುವರಿ ಮಾಡಿಕೊಂಡಿರುತ್ತಾರೆಂದು ಎಲ್ಲಿಯೂ ಹೇಳಿಲ್ಲ ಎಂದರೆ ಸರಿ.

**ಮರು ವಿಚಾರಣೆಃ** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**

**ನಂಜನಗೂಡು.**